# ಭಾರತದ ಪ್ರಜಾಪ್ರಭುತ್ವದ ಪಿತಾಮಹರಾಗಿ ಡಾ. ಬಿ. ಆರ್. ಅಂಬೇಡ್ಕರ್

ಎಲ್ಲಪ್ಪ ಜಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಲಾದಗಿ, ಬಾಗಲಕೋಟೆ.

DOI: https://doi.org/10.5281/zenodo.15504196

## ABSTRACT:

ವಿಸ್ತಾರವಾದ ದೇಶ, ವೈವಿಧ್ಯಮಯವಾದ ಸಂಸ್ಕೃತಿಗಳು, ಸಾವಿರಾರು ಭಾಷೆಗಳು, ಸಾವಿರಾರು ಜಾತಿಗಳು, ವಿಭಿನ್ನ ಮತಗಳು ಈ ಮಣ್ಣಿನಲ್ಲಿ ಜೀವಿಸುತ್ತಿವೆ. ಈ ಎಲ್ಲವುಗಳಿಗೆ ಜೀವ ಕೊಡುವ ತತ್ವ ಯಾವುದು? ಮತ್ತು ಇವುಗಳನ್ನು ಬೆಸೆಯುವ ಸೂತ್ರ ಯಾವುದು? ಎಂಬ ಆಲೋಚನೆಗಳ ಬೆನ್ನ ಹತ್ತಿದಾಗ ಸಿಗುವ ಪೂರಕ ಶಕ್ತಿಗಳ ಬಗ್ಗೆ ಅಧ್ಯಯನಕ್ಕೆ ಪ್ರಜಾಪ್ರಭುತ್ವವೊಂದು ಮುಖ್ಯವಾಗಿ ಮುನ್ನೆಲೆಗೆ ಬರುತ್ತದೆ. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಇದು ಬೆಳೆದು ಬಂದ ಪರಂಪರೆ, ಅದು ಗಟ್ಟಿಗೊಂಡ ಹಿನ್ನೆಲೆಗಳು ಆಸಕ್ತಿದಾಯಕಗಳಾಗಿವೆ.

ಬಾಬಾ ಸಾಹೇಬರು ಪ್ರಜಾಪ್ರಭುತ್ವವನ್ನು ಭಾರತೀಯ ಮಣ್ಣಿನಲ್ಲಿ ಕೃಷಿ ಮಾಡಿದ ಬಗ್ಗೆ ಗಮನಾರ್ಹವಾದದ್ದು. ಎಲ್ಲಾ ಜನರು ಬದುಕಲಿಕ್ಕೆ ಬೇಕಾದ ಜೀವನ ವಿಧಾನ ಮತ್ತು ಆಡಳಿತ ಕ್ರಮವಾಗಿಸುವಲ್ಲಿ ಸಶಕ್ತವಾದ ಸೂತ್ರವೊಂದನ್ನು ಪೋಣಿಸಿದ್ದಾರೆ. ದೇಹಕ್ಕೆ ಹೊಂದಿಕೊಳ್ಳುವ ಅಂಗಿಯನ್ನೆ ಹೊಲಿಯಬೇಕು. ಅಳತೆ ಮೀರಿದರೆ ಅದು ತನ್ನ ಬಾಹ್ಯ ಮತ್ತು ಅಂತರಂಗಕ್ಕೆ ಸರಿ ಹೊಂದುವುದಿಲ್ಲ. ಆಗ ಅದರ ನಿಜ ಸೌಂದರ್ಯವೂ ಹಾಳಾಗುತ್ತದೆ. ಹಾಗಾಗಿ ಭಾರತದಂತಹ ದೇಶಕ್ಕೆ ಸತ್ವಶಾಲಿಯಾಗಿ ಚಲಾವಣೆಗೊಳ್ಳುವ ಜೀವ ಸತ್ವವೆಂದರೆ ಅದು ಪ್ರಜಾಪ್ರಭುತ್ವ. ಎಲ್ಲರನ್ನೂ ಒಂದು ದಾರಕ್ಕೆ ಸೇರಿಸಿ ಕೊಂಡ್ಯೊಯುವ ಬೇಸುಗೆ ಎಂಬುದನ್ನರಿತು ಸಂವಿಧಾನದಲ್ಲಿ ಇದಕ್ಕೆ ಒಂದು ಸ್ಪರ್ಶ ನೀಡಿದ್ದಾರೆ.

ಪ್ರಜಾಪ್ರಭುತ್ವ ಎನ್ನುವುದು ಪ್ರಜೆಗಳಿಂದ ಉತ್ಪನ್ನಗೊಳ್ಳುವ ಅಧಿಕಾರ. ಆ ಅಧಿಕಾರದಿಂದ ಜನರ ಆಶೋತ್ತರಗಳಿಗೆ, ಆಕಾಂಕ್ಷೆಗಳಿಗೆ, ಮನೋಭಾವಗಳಿಗೆ ಸ್ಪಂದನೆ, ಸಂವೇದನೆ, ಸಹವರ್ತಿತನ, ಸಹಭಾಗಿತ್ವಗಳು ಹುಟ್ಟು ಹಾಕಬೇಕು. ಜನ ಕಲ್ಯಾಣಕ್ಕೆ ಅನುವು ಮಾಡಿಕೊಡಬೇಕು. ಏಕೆಂದರೆ ಪ್ರತಿಯೊಂದು ಜೀವಿಗೂ ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆಗಳು ಅಗತ್ಯ ಹಾಗೂ ಅನಿವಾರ್ಯವಾಗಿರುತ್ತವೆ. ಇವು ನೆಲೆಗೊಳ್ಳಲು ಪ್ರಜಾಪ್ರಭುತ್ವದಂತಹ ಅಂತಃಸತ್ವಬೇಕು. ದುರ್ದಮ್ಯವಾದ ಕಾಡಿನಂತೆ ಪ್ರತ್ಯೇಕತೆಯನ್ನು ಕಾಪಾಡಿಕೊಂಡು ಬಂದಿರುವ ವ್ಯವಸ್ಥೆಯು ಬೆರೆಯುವುದು ಕಷ್ಟಸಾಧ್ಯ. ಹಾಗಾಗಿ ಸಮಾಜಮುಖಿಯಾಗಿ, ಮುಖ್ಯವಾಹಿನಿಗೆ ತರಲು ಅವರ ಪ್ರಯತ್ನ ಅದಮ್ಯವಾದದ್ದು.

ಪ್ರಜಾಪ್ರಭುತ್ವ ಎನ್ನುವುದು ಬಹು ಸಂಖ್ಯಾತರ ಪರವಾದ, ಅಲ್ಪ ಸಂಖ್ಯಾತರ ವಿರೋಧವಾದ ವರ್ತನೆಗಳು ಈ ಮಣ್ಣಿಗೆ ಒಗ್ಗವು. ಒಂದು ಸರ್ಕಾರ ಜನರಿಂದ ಆಯ್ಕೆಯಾದ ಮೇಲೆ ಅದರ ಕರ್ತವ್ಯ ಮತ್ತು ಜವಾಬ್ದಾರಿಗಳು

ಮುಖ್ಯವಾಗುತ್ತವೆ. ಅದು ಸಂಧಿಸುವ ಹಾಗೂ ಕ್ರಮಿಸುವ ದಾರಿಯೂ ಗಮ್ಯವಾಗುತ್ತದೆ. ಕಟ್ಟಕಡೆಯ ವ್ಯಕ್ತಿಗೂ ಅವು ತಲುಪಬೇಕು. ಪ್ರಜಾಪ್ರಭುತ್ವದ ತತ್ವಗಳು ಸರ್ವಾಂಗೀಣ ಅಭಿವೃದ್ಧಿಗೆ ಕೊಟ್ಟ ಒತ್ತಾಸೆಗಳೇನು? ಅದರ ಸವಾಲುಗಳೇನು? ಎಂಬುದು ಚರ್ಚಿತ ವಿಷಯವಾಗುತ್ತದೆ. ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಸಾಮಾಜಿಕತೆ, ಶೈಕ್ಷಣಿಕತೆ, ಆರ್ಥಿಕತೆ ಹಾಗೂ ರಾಜಕೀಯ ಮುಂತಾದ ವಲಯಗಳಲ್ಲಿ ಅದು ಪ್ರವೇಶ ಪಡೆದು ಜನರ ಜೀವಾಳದಲ್ಲಿ ಅಸ್ಥಿತ್ವ ಪಡೆದ ರೀತಿಯೂ ಈ ಅಧ್ಯಯನದ ಪ್ರಧಾನ ಆಶಯವಾಗಿದೆ.

## KEYWORDS:

ಪ್ರಜಾಪ್ರಭುತ್ವ, ಸಾರ್ವಜನಿಕ ಪ್ರಜ್ಞೆ, ಜಾತ್ಯತೀತತೆ, ಪ್ರಜಾಪ್ರಭುತ್ವದ ಸಫಲತೆ, ಪ್ರಜಾಪ್ರಭುತ್ವದ ಸವಾಲುಗಳು.

ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂಬ ಹೆಗ್ಗಳಿಕೆ ಭಾರತಕ್ಕಿದೆ. ಈ ರಾಷ್ಟ್ರದ ಅಸ್ಥಿಪಂಜರ ಅನೇಕತೆ. ಈ ದೇಶದ ದೇಹಕ್ಕೆ ರಕ್ತ ಪರಿಚಲನೆಯನ್ನು ಗಮನಿಸಿದಾಗ ಅನೇಕ ಮಜಲುಗಳಲ್ಲಿ ಹರಿದು ಹಾದು ಹೋಗುತ್ತದೆ. ಹಲವು ಧರ್ಮಗಳು, ಅನೇಕ ಜಾತಿಗಳು, ಬಾಹುಳ್ಯ ಭಾಷೆಗಳು, ಬಗೆ ಬಗೆಯ ಸಂಸ್ಕೃತಿಗಳು, ಭಿನ್ನ ವಿಭಿನ್ನ ಪ್ರದೇಶಗಳಿಂದ ಭಾರತಕ್ಕೆ ವೈವಿಧ್ಯತೆಯ ಗರಿ ಸಿಕ್ಕಿಸಿಕೊಂಡಿದೆ. ಅಲ್ಲದೆ ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿದ ಹಿರಿಮೆಯ ಪಾಲುದಾರಿಕೆ ಈ ದೇಶಕ್ಕಿದೆ. ಇದು ಹೇಗೆ ಸಾಧ್ಯವಾಯಿತು? ಪ್ರಜಾಪ್ರಭುತ್ವ ವ್ಯವಸ್ಥೆ ಧುತ್ತೆಂದು ಎದ್ದು ನಿಂತ ಕಟ್ಟಡವಲ್ಲ. ಇದರ ತಳಹದಿ ಮತ್ತು ಬುನಾದಿಯ ರೂಪಿಕೆ ಹೇಗಾಯಿತು? ಪ್ರಜಾಪ್ರಭುತ್ವದ ವಿನ್ಯಾಸವನ್ನು ಕಟ್ಟುವಲ್ಲಿ ಹಿಂದಿರುವ ಶಕ್ತಿಗಳಾವುವು? ಭಾರತದ ಪ್ರಜಾಪ್ರಭುತ್ವದ ಪಿತಾಮಹರಾಗಿ ಅಂಬೇಡ್ಕರ್ ಅವರ ಕೊಡುಗೆ ಏನು? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಈ ಪ್ರಬಂಧದ ಮುಖ್ಯ ಆಶಯ.

ಪ್ರಜಾಪ್ರಭುತ್ವದ ಶಿಲೆಯನ್ನು ಕೆತ್ತಿದ ಅನೇಕ ಶಿಲ್ಪಿಕಾರರ ಕೊಡುಗೆ ಇದ್ದರೂ ಅದಕ್ಕೊಂದು ಅಧಿಕೃತ ಆಕಾರ ಮತ್ತು ಆಕೃತಿಯನ್ನು ನೀಡಿದ್ದು ಅಲ್ಲದೆ ಜೀವಕಳೆ ಮತ್ತು ಜೀವಂತಿಕೆಯನ್ನು ತುಂಬಿದ್ದು ಬಾಬಾ ಸಾಹೇಬ್ ಅಂಬೇಡ್ಕರ್ ರ ಪಾತ್ರ ಗಣನೀಯವಾಗಿದೆ. ಪ್ರಜಾಪ್ರಭುತ್ವದ ಒಂದು ಚೌಕಟ್ಟನ್ನು ಮತ್ತದರ ಸೌಂದರ್ಯವನ್ನು ಅರಿಯಬೇಕಾದರೆ ಮೂವರ ಚಿಂತನೆಗಳು ಪ್ರಭಾವಿಸುತ್ತವೆ. ಒಬ್ಬರು–ಬುದ್ದ, ಇನ್ನೊಬ್ಬರು–ಬಸವಣ್ಣ, ಮತ್ತೊಬ್ಬರು–ಬಾಬಾ ಸಾಹೇಬ್ ಅಂಬೇಡ್ಕರ್. ಬುದ್ಧ, 'ಬೌದ್ಧ ಸಂಘ'ಗಳ ಸ್ಥಾಪನೆಯ ಮೂಲಕ ಪ್ರಜಾಪ್ರಭುತ್ವ ಮಾದರಿಯ ನೀಲ ನಕಾಶೆ ಹಾಕಿ ಕೊಟ್ಟರು. ಬಸವಣ್ಣ, ಅದನ್ನು ಸಮಾಜಕ್ಕೆ ಅನ್ವಯಿಸಿ 'ಅನುಭವ ಮಂಟಪ' ಕಟ್ಟಿದರು. ಬಾಬಾ ಸಾಹೇಬರು 'ಸಂವಿಧಾನ'ದ ಮೂಲಕ ಅನುಶಾಸನಗೊಳಿಸಿದರು. ಇವೆಲ್ಲವೂ ಪ್ರಜಾಪ್ರಭುತ್ವದ ಅಡಿಗಲ್ಲುಗಳು. ಎಲ್ಲರೂ ಮುಕ್ತವಾಗಿ

ಸಹಭಾಗಿಗಳಾಗುವುದೇ ಇದರ ಮೂಲ ಬೀಜ. ಈ ಬೀಜವನ್ನು ಹದ ಮಾಡಿಯೇ ಚೆಲ್ಲಬೇಕು. ಆಗ ತಾನೇ ಅದು ಮೊಳೆತು ಸಸಿಯಾಗೋದು. ಗಿಡವಾಗಿ ಮರವಾಗೋದು. ಆ ಮರದ ಮೇಲಿನ ರೆಂಬೆಕೊಂಬೆಗಳಂತೆ ಅನೇಕ ತತ್ವಗಳನ್ನು ಕಟ್ಟಬಹುದು. ಪ್ರಜಾತಂತ್ರ ನೆರಳಿಲ್ಲದ ವ್ಯವಸ್ಥೆ ಬೇರು ಸತ್ತ ಕೊರಡಿನಂತಿರುತ್ತದೆ!

ವೈವಿಧ್ಯತೆಯ ಸತ್ವವಿದೆ. ಫಲವತ್ತಾದ ಭೂಮಿಯೂ ಇದೆ. ಮಣ್ಣಿನ ಗುಣಕ್ಕೆ ತಕ್ಕನಾದ ಬೆಳೆ ಬಿತ್ತದಿದ್ದರೆ ಫಲ ಕೊಯ್ಲು ಸಾಧ್ಯವೇ? ಇದನ್ನರಿತು ನೇಗಿಲಯೋಗಿಯಂತೆ ಸಂವಿಧಾನದ ಕೃಷಿಯಲ್ಲಿ ಫಸಲು ತೆಗೆಯುವ ಪ್ರಯತ್ನ ಅನನ್ಯವಾದದ್ದು. ಪ್ರಜಾಪ್ರಭುತ್ವದ ಉಳಿಮೆ, ಸಮಾನತೆಯ ಬೀಜ, ಸ್ವಾತಂತ್ರ್ಯದ ಬೇರು, ಸಹೋದರತೆಯ ರೆಂಬೆಕೊಂಬೆಗಳಿಂದ ಹೂವು ಹಣ್ಣುಗಳ ಫಲ ಮೂಡಬೇಕೆಂಬುದು ಸದಾಶಯ.

**ಸಾಮಾಜಿಕ ಪ್ರಜಾಪ್ರಭುತ್ವ:**

ಭಾರತೀಯ ಸಮಾಜ ಮತ್ತು ಅದರ ಸಾಮಾಜಿಕ ವರ್ತನೆಗಳು ಅಧ್ಯಯನ ಮಾಡದ ಹೊರೆತು ಅದಕ್ಕೊಂದು ರೂಪರೇಷೆ ಸಿಗುವುದಿಲ್ಲ. ಏಕೆಂದರೆ ಜಾತಿ ವ್ಯವಸ್ಥೆ ಇದೆಯಲ್ಲ ಅದು ಅನೇಕ ತಡೆಗೋಡೆಗಳನ್ನು ಸೃಷ್ಟಿಸಿ, ಸಾಮರಸ್ಯಕ್ಕೆ ಭಂಗ ತಂದಿದೆ. ಸಹಬಾಳ್ವೆ, ವ್ಯಕ್ತಿಗೌರವಕ್ಕೆ ಕೊಳ್ಳಿ ಇಟ್ಟಿದೆ. ದಡಗಳನ್ನು ಸೃಷ್ಟಿಸಿದೆ. ಸ್ವಾತಂತ್ರ್ಯ ಮತ್ತು ಸಮಾನತೆ ನೀಡದೆ ವಂಚಿಸಿದೆ. ಶೋಷಣೆ ಮತ್ತು ದಬ್ಬಾಳಿಕೆ ಜೀವಂತವಾಗಿಟ್ಟು ಅಧಿಕಾರ ಸ್ವಾಧೀನಪಡಿಸಿಕೊಂಡು ಅನುಭವಿಸಿದೆ. ನಿಂತವರು ನಿಂತಲ್ಲಿಯೇ, ಕುಂತವರು ಕುಂತಲ್ಲಿಯೇ. ಕುಂತವರು ನಿಲ್ಲುವಂತಿಲ್ಲ, ನಿಂತವರು ಕೂರುವಂತಿಲ್ಲ. ನಡಿಗೆಯಂತೂ ಇಲ್ಲವೇ ಇಲ್ಲ ಇದು ನಿರ್ಬಂಧಿತ ಸಮಾಜದ ಲಕ್ಷಣ. ಇಂತಹ ಆಚರಣೆಯನ್ನು ಇಂದು ಬೇರೆ ರೀತಿಯಲ್ಲಿ ಕಾಪಿಟ್ಟುಕೊಂಡಿದೆ. ಯಾವುದೇ ಸಮಾಜಕ್ಕೆ ಮಾನವೀಯತೆಯೇ ಉಸಿರು. ಅದೊಂದು ಚಾಲಕ ಶಕ್ತಿ. ಈ ಜೀವ ಚಲನೆಗಳು ನಿಂತರೆ, ಜಡ ಜಗತ್ತು ನಿರ್ಮಾಣವಾಗುತ್ತದೆ. ಸಮಾಜವೆಂಬ ಬಹು ಮಹಡಿಯ ಕಟ್ಟಡ ನಿರ್ಮಿಸಿ, ಜಾತಿಯ ಅಂತಸ್ತುಗಳನ್ನು ಕಟ್ಟಿದರೆ ಸಾಕೇ? ಸಹೋದರತೆಯ ಮೆಟ್ಟಿಲುಗಳು. ಸಮಾನತೆಯ ಗಾಳಿ ಬೆಳಕಿನ ಕಿಟಕಿಗಳಿಲ್ಲದ ಕಟ್ಟಡ ಮುಚ್ಚಿದ ಸಾಮಾಜಿಕ ವ್ಯವಸ್ಥೆಗೆ ಉದಾಹರಣೆಯಲ್ಲವೇ? ವಿಮೋಚನೆಗೆ ಪ್ರಜಾಪ್ರಭುತ್ವವೂ ಒಂದು ಪ್ರಬಲ ತತ್ವ. ಸಂವಿಧಾನದ ಮೂಲಕ ಅಧಿಕಾರ, ಸ್ಥಾನಮಾನಗಳು, ಅವಕಾಶಗಳ ವಿಕೇಂದ್ರೀಕರಣಕ್ಕೆ ಇದು ಮುನ್ನುಡಿ ಬರೆಯಿತು ಎಂದರೆ ತಪ್ಪಾಗಲಾರದು.

ಬಾಬಾ ಸಾಹೇಬರು ಪ್ರಬಲ ಪ್ರಜಾಪ್ರಭುತ್ವವಾದಿ. ಅವರಿಗೆ ಪ್ರಜಾಪ್ರಭುತ್ವದ ಅನಿವಾರ್ಯತೆ ಏಕೆ ಉಂಟಾಯಿತು? ಎನ್ನುವುದಕ್ಕೆ ಇತಿಹಾಸವು ಹಲವು ಮೂಲಾಧಾರಗಳನ್ನು ನೀಡುತ್ತದೆ. ಹಿಂದೆ ರಾಜಪ್ರಭುತ್ವ ವ್ಯವಸ್ಥೆ ಇತ್ತು. ರಾಜನೇ ಇಲ್ಲಿ

ಪರಮಾಧಿಕಾರಿ. ರಾಜರ ನಂತರ ತನ್ನ ಮಕ್ಕಳು ಹೀಗೆ ವಂಶ ಪಾರಂಪರ್ಯವಾಗಿ ಆಡಳಿತ ನಡೆಯುತ್ತಿತ್ತು. ಸಾಮಾನ್ಯರ ಸಹಭಾಗಿತ್ವ ಎಲ್ಲಿತ್ತು? ಜನಾಧಿಕಾರ, ಜನಾದೇಶ ಇಲ್ಲಿ ಶೂನ್ಯ. ಇನ್ನು ಸಾಮಾಜಿಕ ಸ್ಥಿತಿ–ಗತಿಯಂತೂ ತೀರಾ ಭಿನ್ನವಾಗಿತ್ತು. ಜಾತಿ, ವರ್ಣ, ಲಿಂಗ ಇವುಗಳಿಂದ ತುಂಬಿತ್ತು. ಅಧಿಕಾರ, ನ್ಯಾಯ, ಸಮಾನತೆ ಮುಂತಾದವು ಸಾಮಾಜಿಕವಾಗಿ ಕುಗ್ಗಿ ಹೋದ ಸಮುದಾಯಗಳಿಗೆ ದಕ್ಕಲೇ ಇಲ್ಲ. ‘‘ಭಾರತದಲ್ಲಿ ಪ್ರಜಾಪ್ರಭುತ್ವ ಯಾಕೆ ಬೆಳೆವಣಿಗೆ ಹೊಂದಲಿಲ್ಲ? ಇದೊಂದು ಮುಖ್ಯ ಪ್ರಶ್ನೆ; ಉತ್ತರವಂತೂ ಬಹಳ ಸರಳ. ಹಿಂದೂ ಧರ್ಮ ಭ್ರಾತೃತ್ವ ಬೋಧಿಸುವುದಿಲ್ಲ. ಅದಕ್ಕೆ ಬದಲಾಗಿ ವರ್ಣಗಳಾಗಿ, ವರ್ಗಗಳಾಗಿ, ಪ್ರತ್ಯೇಕ ಜಾತಿಗಳಾಗಿ ವಿಂಗಡಿಸಿದ್ದ ಸಮಾಜದ ವಿಭಜನೆ ಬೋಧಿಸುತ್ತದೆ. ಇಂತಹ ಪ್ರತ್ಯೇಕತೆ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವಕ್ಕೆ ಅವಕಾಶವಾದರೂ ಹೇಗೆ? ಹಿಂದೂ ಸಾಮಾಜಿಕ ವ್ಯವಸ್ಥೆ ಪ್ರಜಾಪ್ರಭುತ್ವ ಹೀನವಾಗಿರುವುದು ಆಕಸ್ಮಿಕವೇನಲ್ಲ. ಆದರೆ ವಿನ್ಯಾಸವೇ ಪ್ರಜಾಪ್ರಭುತ್ವ ಹೀನವಾಗಿದೆ. ಇಲ್ಲಿ ಕಂಡು ಬರುವ ವಿಭಜನೆ ಜಾತಿಗಳ, ಜಾತಿ ರಹಿತರ, ಜಾತಿ ಬಾಹಿರದ ಪ್ರತ್ಯೇಕತೆ. ಇದು ಕೇವಲ ಸಿದ್ಧಾಂತವೂ ಅಲ್ಲ ಅನುಷ್ಠಾನಗೊಂಡಿರುವ ಕಟ್ಟಳೆಗಳು. ಇವೆಲ್ಲವೂ ಪ್ರಜಾಪ್ರಭುತ್ವದ ಅಡ್ಡಗೋಡೆಗಳು, ತೊಡಕುಗಳು’’[1] ಭಾರತದಂತಹ ಸಾಮಾಜಿಕ ಪರಿಸರದಲ್ಲಿ ಪ್ರಜಾಪ್ರಭುತ್ವದ ಬೆಳೆವಣಿಗೆಗೆ ಹಲವು ತೊಡಕುಗಳಿವೆ. ಅದರಲ್ಲೂ ಜಾತಿ ವ್ಯವಸ್ಥೆ ಮತ್ತು ಪ್ರತ್ಯೇಕತೆ ಪ್ರಜಾಪ್ರಭುತ್ವದ ಅನುಷ್ಠಾನಕ್ಕೆ ಇರುವ ಬಹುದೊಡ್ಡ ಕಂದಕಗಳು. ಸಹೋದರತೆ ಮತ್ತು ಸಹಬಾಳ್ವೆಗಳಿಲ್ಲದ ಪ್ರಜಾಪ್ರಭುತ್ವ ಪೂರ್ಣಗೊಳ್ಳಲಾರದು. ಈ ರೀತಿಯ ಹೀನ ಸಂವೇದನೆಗೆ ಕಾರಣವಾದದ್ದು, ಹಿಂದೂ ಸಾಮಾಜಿಕ ವ್ಯವಸ್ಥೆ. ಈ ಚಿಂತನೆ ಆಕಸ್ಮಿಕವಾದುದಲ್ಲ ಅನಿವಾರ್ಯವಾಗಿ ಕಟ್ಟಲ್ಪಟ್ಟಿದ್ದು. ಹಾಗಾಗಿ ಸಾಮಾಜಿಕ ಪ್ರಜಾಪ್ರಭುತ್ವ ಅಗತ್ಯವೆನಿಸಿತು. ‘‘ಸಾಮಾಜಿಕ ಪ್ರಜಾಪ್ರಭುತ್ವವಿಲ್ಲದಿದ್ದರೆ, ಪ್ರಜಾರಾಜ್ಯದ ವ್ಯವಸ್ಥಿತ (ಕ್ರಮಬದ್ಧ) ಚೌಕಟ್ಟಿಗೆ ಬೆಲೆ ಇರುವುದಿಲ್ಲ, ಹಾಗೂ ಅದು ನಿಜವಾಗಿಯೂ ಅನರ್ಹವಾಗಿರುತ್ತದೆ. ’’[2] ಪ್ರಜಾರಾಜ್ಯದ ಚೌಕಟ್ಟಿಗೆ ಸಾಮಾಜಿಕ ಪ್ರಜಾಪ್ರಭುತ್ವ ರನ್ನಗನ್ನಡಿ. ಸಾಮಾನ್ಯ ಚಿತ್ರಕ್ಕೆ ಸುವರ್ಣ ಚೌಕಟ್ಟು ಅಂತಾರಲ್ಲ ಹಾಗೆ. ಸಾಮಾಜಿಕ ಚಲನಶೀಲತೆಗೆ ಮತ್ತು ಪ್ರಜ್ಞಾಪೂರ್ವಕವಾದ ಸಂವಹನಕ್ಕೆ ಪರಿಣಾಮಕಾರಿ ಕೀಲಿ ಕೈ ಎಂದರೆ ಪರಸ್ಪರ ಮೈತ್ರಿ ಮತ್ತು ಸಮನ್ವಯಗಳು. ಗೌರವ, ಪ್ರೀತಿ, ಅನುಭೂತಿಗಳು ಸಹಜೀವಿಗಳಿಂದಲೇ ಒಡಮೂಡಬೇಕು. ಆಗಲೇ ಹೊಂದಿಕೊಳ್ಳುವ ಜೀವನ ಕ್ರಮ ಚಲಿಸುತ್ತದೆ. ಜಡಗೊಂಡರೆ ಊನ ಸ್ಥಿತಿಯಲ್ಲಿ ಅನರ್ಹಗೊಳ್ಳುತ್ತದೆ.

ಸಾಮಾಜಿಕ ಪ್ರಜಾಪ್ರಭುತ್ವ ಎಂದರೇನು? ಅದೊಂದು ಜೀವನಕ್ರಮ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಜೀವನ ತತ್ವವನ್ನಾಗಿ ಮಾಡಿಕೊಂಡ ಕ್ರಮ. ಅದೊಂದು ತ್ರಿನೀತಿ ಸಂಗಮ–ಒಂದರಿಂದ ಇನ್ನೊಂದು ವಿಚ್ಛೇದನಗೊಂಡರೆ

ಪ್ರಜಾತಂತ್ರದ ಉದ್ದೇಶವೇ ಕಮರಿದಂತೆ"[3] ಸಾಮಾಜಿಕವಾದ ಜೀವನ ಕ್ರಮದಲ್ಲಿ ಪ್ರಜಾಪ್ರಭುತ್ವ ಜೀವಿಸಬೇಕು ಆ ಜೀವಕ್ಕೆ ಮೂರು ಆಧಾರ ಸ್ತಂಭಗಳು ಎಂದರೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳು ಇವೇ ಜೀವನ ತತ್ವಗಳು. ಈ ಮೂರು ನೀತಿಗಳು ಸಂಗಮಗೊಳ್ಳದ ಸಾಮಾಜಿಕ ಜೀವನ, ಪ್ರಜಾತಂತ್ರದ ವಿರೋಧಿಯಾಗಿರುತ್ತದೆ. ಸಾಂಘಿಕತೆ ಮತ್ತು ಸಹಬಾಳ್ವೆ ಜೀವನದ ಕ್ರಮಗಳು. ಈ ರೆಂಬೆಕೊಂಬೆಗಳು ಸಾಮಾಜಿಕ ಸಂಬಂಧಗಳ ಬೇರಿನಲ್ಲಿರುತ್ತವೆ. ಒಂದು ಸಮಾಜ ರೂಪಿಸುವ ಮನುಷ್ಯ ಮನುಷ್ಯರ ನಡುವಿನ ಸಂಬಂಧದ ಹೊಂದಾಣಿಕೆಗಳಲ್ಲಿ ನೋಡಬೇಕಿದೆ, ಹುಡುಕಾಡಬೇಕಿದೆ.

**ರಾಜಕೀಯ ಪ್ರಜಾಪ್ರಭುತ್ವ:**

ಪ್ರಜಾಪ್ರಭುತ್ವದ ಸ್ವರೂಪವೆಂದರೆ ಒಂದು ಸರ್ಕಾರ ರಚಿಸುವುದಷ್ಟೇ ಅಲ್ಲ. ರಾಜಕೀಯಕ್ಕೂ ಮತ್ತು ಪ್ರಜಾಪ್ರಭುತ್ವಕ್ಕೂ ಇರುವ ಸಂಬಂಧವೇನಿರಬಹುದು? ಕುತೂಹಲದಿಂದ ನೋಡಬೇಕು. "ಇನ್ನೊಂದು ಅಭಿಪ್ರಾಯದಂತೆ ಪ್ರಜಾಪ್ರಭುತ್ವ ಎಂಬುದು ಕೇವಲ ಸರ್ಕಾರದ ಒಂದು ಸ್ವರೂಪ ಮಾತ್ರ ಅಲ್ಲ, ಅದಕ್ಕಿಂತ ಹೆಚ್ಚು ಅದು ಸಮಾಜದ ಸಂಘಟನೆಯ ಸ್ವರೂಪ. ಪ್ರಜಾತಂತ್ರ ಸಮಾಜದ ರಚನೆಯಲ್ಲಿ ಎರಡು ಪ್ರಮುಖ ಲಕ್ಷಣಗಳಿವೆ; ಮೊದಲನೆಯದು, ವರ್ಗಗಳಾಗಿ ಸಮಾಜವನ್ನು ವಿಂಗಡಿಸದಿರುವುದು. ಎರಡನೆಯದು, ವ್ಯಕ್ತಿಗಳಾಗಲಿ ಗುಂಪುಗಳಾಗಲಿ ನಿರಂತರ ಮರು ಹೊಂದಾಣಿಕೆ ಮತ್ತು ಪರಸ್ಪರ ಆಸಕ್ತಿಗಳನ್ನು ಗುರುತಿಸಿಕೊಳ್ಳುವ ಸಾಮಾಜಿಕ ಅಭ್ಯಾಸಕ್ಕೆ ಸಿದ್ಧವಾಗಿರುವುದು."[4] ಸಂವಿಧಾನದಲ್ಲಿ ಸಮಾನತೆ, ಸಹೋದರತೆಗಳು ಮೂಲ ಧಾತುಗಳೆಂದು ಒಪ್ಪಿಕೊಂಡಿದ್ದರೂ ಜಾತಿ ಪದ್ಧತಿಯಿಂದ ಹೊರತಾದ ರಾಜಕಾರಣವನ್ನು ನೋಡಲು ಸಾಧ್ಯವಾಗುತ್ತಿಲ್ಲ. ಚುನಾವಣೆ ಪ್ರಜಾಪ್ರಭುತ್ವದ ಬುನಾದಿಯಾದರೂ ಕೂಡ ಸರ್ಕಾರ ರಚನೆಗೊಳ್ಳುವುದು ಜಾತಿ ಸೌಧದ ಮೇಲೆಯೇ. ಹಾಗಂತ ಪ್ರಜಾಪ್ರಭುತ್ವವೆಂದರೆ, ಒಂದು ಸರ್ಕಾರದ ರಚನೆಯ ಸ್ವರೂಪ ಎಂದು ಕುರುಡಾಗಿ ಅರ್ಥೈಸಿಕೊಳ್ಳುವುದು ಸರಿಯಲ್ಲ. ಸರ್ಕಾರ ರಚಿಸುವವರಲ್ಲಿ ಮನುಷ್ಯತ್ವದ ಭಾವನೆಗಳು ಒಳಗೊಂಡಿರಬೇಕು. ಇಲ್ಲವಾದರೆ ಅದು ಸಂಘರ್ಷಾತ್ಮಕ ನೆಲೆಯಿಲ್ಲದೆ ಅದು ತನ್ನ ಕೆಲಸ ನಿರ್ವಹಿಸುವುದಿಲ್ಲ. "ಭಾರತಕ್ಕೆ ಪ್ರಜಾಪ್ರಭುತ್ವ ಹೇಗಿದೆ ಎಂದರೆ ಭಾರತಾಂಬೆಯ ಪಾದಗಳಿಗೆ ಅಳತೆ ಮೀರಿದ ಚಪ್ಪಲಿಗಳನ್ನು ತೊಡಸಿ ನಡೆಸಿದ ಹಾಗಿದೆ! ಆಕೆ ನಡೆಯಲೂ ಆಗದೆ, ಓಡಲೂ ಆಗದೆ ತೆವಳುತ್ತಿರುವುದು ಕಾಣುತ್ತಿದೆ"[5] ಮೂಡ್ನಾಕೂಡು ಚಿನ್ನಸ್ವಾಮಿಯವರ ಈ ಮಾತು ಇಂದಿನ ಪ್ರಜಾಪ್ರಭುತ್ವದ ಸ್ಥಿತಿಗೆ ಕೈಗನ್ನಡಿಯಾಗಿದೆ. ಹೊರ ಜಗತ್ತಿನ ಕಣ್ಣಿಗೆ ಭಾರತ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂದು ಗೋಚರಿಸಿದರೂ, ಆದರ ಒಳಗಿನ ಹೂರಣದ ಸತ್ವ ಪರಿಚಯವಿಲ್ಲದೆ ಇರಲಾರದು. ಇಲ್ಲಿ ಅಳತೆ ಮೀರಿರುವುದು ಏನು ಅಂತಂದ್ರೆ ಭಾರತಾಂಬೆಯ

ಪಾದಗಳಲ್ಲ ವ್ಯವಸ್ಥೆಯ ಚಪ್ಪಲಿಗಳು ನಡೆಯಲು ಮತ್ತು ಓಡಲು ಆಗದೆ ತೆವಳುತ್ತಿರುವ ಅಸಹಾಯಕ ಸ್ಥಿತಿ ಕಾಣುತ್ತದೆ. ಅಳತೆ ಮೀರಿದ ವಸ್ತ್ರ ತೊಡಸಿದಾಗ ಸ್ಫುರದ್ರೂಪತೆಯನ್ನು ಕಳೆದುಕೊಳ್ಳುತ್ತದೆ. ಬಟ್ಟೆ ಎಷ್ಟೇ ಮೌಲ್ಯಯುತವಾಗಿರಲಿ, ವರ್ಣರಂಜಿತವಾಗಿರಲಿ ಅದು ದೇಹದ ಆಕಾರಕ್ಕೆ ತಕ್ಕಂತೆ ವಿನ್ಯಾಸ ಒಳಗೊಳ್ಳಬೇಕು, ಸ್ವಲ್ಪ ಆಯ ತಪ್ಪಿದರೂ ಅದಕ್ಕಿರುವ ಬೆಲೆಯೂ ಕುಂದಿ ಹೋಗುತ್ತದೆ, ಕಂದಿ ಹೋಗುತ್ತದೆ. ಶರೀರಕ್ಕೆ ಅನುಗುಣವಾಗಿ ಹೊಲಿಯುವ ತತ್ವಗಳಿರಬೇಕು, ಸಿಂಪಿಗಳಿರಬೇಕು. "ಸಮಾನತೆ ಮತ್ತು ಸ್ವಾತಂತ್ರ್ಯ ಪ್ರಜಾಪ್ರಭುತ್ವದ ಮುಖ್ಯ ಕಳಕಳಿ ಎಂಬುದು ನಿಸ್ಸಂದೇಹವಾಗಿದ್ದು ಆದರೆ ಮುಖ್ಯ ಪ್ರಶ್ನೆಯೆಂದರೆ ಈ ಸಮಾನತೆ ಮತ್ತು ಸ್ವಾತಂತ್ರ್ಯ ಎಂಬ ಕಳಕಳಿಗಳನ್ನು ಯಾವುದು ಹಿಡಿದಿರುತ್ತದೆ-ಆಧಾರವಾಗಿರುತ್ತದೆ? ಕೆಲವರು ರಾಜ್ಯದ ಕಾನೂನು-ನಾಡಿನ ನ್ಯಾಯ ಎಂದು ಅಭಿಪ್ರಾಯಪಡುತ್ತಾರೆ. ಇದು ಸರಿಯಾದ ಉತ್ತರವಲ್ಲ. ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಅವಿರತವಾಗಿ ಹಿಡಿದಿಡುವುದು-ಉಳಿಸುವುದು 'ಸಹವರ್ತಿ ಸಂವೇದನೆ'. ಇದನ್ನೇ ಫ್ರೆಂಚ್ ಕ್ರಾಂತಿಕಾರರು 'ಭ್ರಾತೃತ್ವ' ಎಂದು ಹೇಳುವುದು. ಭ್ರಾತೃತ್ವ ಎಂಬ ಪದವು ಸಾಕಷ್ಟು ಸೂಕ್ತವಾದುದಲ್ಲವೇನೋ. ಸೂಕ್ತ ಪದವೆಂದರೆ ಬುದ್ಧ ಹೇಳಿದ 'ಮೈತ್ರಿ'. ಈ ಅರ್ಥದಲ್ಲಿ ಭ್ರಾತೃತ್ವವಿಲ್ಲದ ಸಮಾನತೆ ಸ್ವಾತಂತ್ರ್ಯವನ್ನು, ಸ್ವಾತಂತ್ರ್ಯ ಸಮಾನತೆಯನ್ನು ಹಾಳುಗೆಡವುತ್ತದೆ. ಸ್ವಾತಂತ್ರ್ಯ ಸಮಾನತೆಯನ್ನು ಮತ್ತು ಸಮಾನತೆ ಸ್ವಾತಂತ್ರ್ಯವನ್ನು ಅಳಿಸಲಾಗದಂತಹ ಪ್ರಜಾಪ್ರಭುತ್ವ ನೆಲೆಯಾಗಲು ಮೂಲ ಕಾರಣವೇ ಈ ಭ್ರಾತೃತ್ವ. ಆದ್ದರಿಂದ ಪ್ರಜಾಪ್ರಭುತ್ವದ ಮೂಲಾಧಾರ, ಬೇರು-ಭ್ರಾತೃತ್ವ."[6] ಪ್ರಜಾಪ್ರಭುತ್ವದ ಶರೀರಕ್ಕೆ ಸಮಾನತೆ ಮತ್ತು ಸ್ವಾತಂತ್ರ್ಯಗಳು ಚಲಿಸುವ ಅವಯವಗಳು ಇದ್ದಂತೆ. ಇವುಗಳ ಚಲನೆಗೆ ಸಹವರ್ತಿ ಸಂವೇದನೆ ಬೇಕು. ಮೈತ್ರಿ ಗುಣ ಇರಬೇಕು. ಇಲ್ಲದೇ ಹೋದರೆ ಸ್ಥಾವರಗೊಳ್ಳುವುದು, ಒಂದಡೆ ನಿಂತು ಬಿಡುತ್ತವೆ. ಎಲ್ಲವನ್ನೂ ಕಾನೂನಿನ ಇಲ್ಲವೆ ನ್ಯಾಯದ ಮೂಲಕವೇ ಕಳಕಳಿಗಳನ್ನು ಹಿಡಿದಿಡಲು ಸಾಧ್ಯವಿಲ್ಲ. ಹಾಗಾಗಿ ಪ್ರಜಾಪ್ರಭುತ್ವದ ಮೂಲ ಕೇಂದ್ರ ಧಾತು ಭ್ರಾತೃತ್ವವೇ.

ಪ್ರಜಾಸತ್ತಾತ್ಮಕ ಸರ್ಕಾರವು ಪ್ರಜೆಗಳ ನಂಬಿಕೆ ಮತ್ತು ಒಲವುಗಳ ಮೇಲೆ ರೂಪಗೊಳ್ಳುವಂತಹದ್ದು. ಯಾವುದೇ ಎರಡು ಪಕ್ಷಗಳು ಆಡಳಿತ ಮತ್ತು ವಿರೋಧ ಸ್ಥಾನಗಳಲ್ಲಿ ಕೆಲಸ ಮಾಡಿದಾಗ ಮಾತ್ರ ಪ್ರಜಾಸತ್ತಾತ್ಮಕವಾಗಬಲ್ಲದು. ಜನಪರ ಕಾಳಜಿಗಳಿಗೆ ವಿರೋಧ ಪಕ್ಷದ ಅನಿವಾರ್ಯತೆ ತುಂಬಾ ಇರುತ್ತದೆ. "ವಿರೋಧ ಪಕ್ಷವಿಲ್ಲದೆ ಪ್ರಜಾಪ್ರಭುತ್ವವಿರಲಾರದು. ಕ್ರಿಯಾಶೀಲ ವಿರೋಧ ಪಕ್ಷವು ಇರಲೇಬೇಕಾಗಿರುವುದು ಯಶಸ್ವಿ ಪ್ರಜಾಪ್ರಭುತ್ವಕ್ಕಿರಬೇಕಾದ ಷರತ್ತು. ವಿರೋಧವು ಮುಕ್ತ ರಾಜಕೀಯ ಜೀವನದ ಕೀಲಿಕೈ ಆಗಿದೆ. ಪ್ರಜಾಪ್ರಭುತ್ವವು ವಿರೋಧ ಪಕ್ಷವಿಲ್ಲದೆ ಸರಿಯಾಗಿ ಕೆಲಸ ಮಾಡಲಾರದು. ವಿರೋಧ ಪಕ್ಷವು ಸಹ ಸರ್ಕಾರದಷ್ಟೇ

ಜೀವಂತವಾಗಿರಬೇಕು."[7] ವಿರೋಧ ಪಕ್ಷವು ಪ್ರಜಾಪ್ರಭುತ್ವದ ಭಾಗ. ಮುಕ್ತ ರಾಜಕೀಯ ಜೀವನದ ಅವಕಾಶವನ್ನು ಒದಗಿಸಿ ಕೊಡುತ್ತದೆ. ವಿರೋಧ ಪಕ್ಷ ಇದ್ದಾಕ್ಷಣ ಪ್ರಜಾಪ್ರಭುತ್ವ ಇದೆ ಎಂದುಕೊಳ್ಳುವಂತಿಲ್ಲ ಅದು ಕ್ರಿಯಾಶೀಲವಾಗಿರಬೇಕು ಹಾಗೂ ಸರ್ಕಾರದಷ್ಟೇ ಜೀವಂತವಾಗಿರಬೇಕು. ಆದ್ದರಿಂದ ವಿರೋಧ ಪಕ್ಷವು ಸದಾ ಎಚ್ಚರ ಮತ್ತು ಕಣ್ಗಾವಲಿನಲ್ಲಿರಬೇಕು. ಆಡಳಿತ ಪಕ್ಷಕ್ಕೆ ಕಿವಿ ಹಿಂಡುವ ಕೆಲಸ ಮಾಡಬೇಕು. ನಡೆದದ್ದೇ ದಾರಿ; ತುಳಿದದ್ದೇ ಮಾರ್ಗ ಎಂಬ ಭ್ರಮೆ ಕಳಚಿ ಜನಪರ ಆಲೋಚನೆಗಳಿಗೆ ಇಂಬು ಕೊಡುವಂತೆ ಮಾಡಬೇಕು. ವಿರೋಧ ಪಕ್ಷಗಳೇ ಇಲ್ಲದ ವ್ಯವಸ್ಥೆ ಪ್ರಜಾಪ್ರಭುತ್ವದ ತೆರೆಯ ಹಿಂದೆ ನಡೆಸುವ ನಿರಂಕುಶ ಆಡಳಿತ ವ್ಯವಸ್ಥೆಗೆ ದಾರಿ ಮಾಡಿಕೊಡದಂತೆ ಜಾಗೃತವಾಗಿರಬೇಕು.

**ಸಾರ್ವಜನಿಕ ಪ್ರಜ್ಞೆ:**

ಸಾರ್ವಜನಿಕ ಪ್ರಜ್ಞೆಯು ಪ್ರಜಾಪ್ರಭುತ್ವಕ್ಕೆ ಅತ್ಯವಶ್ಯಕವಾದ ಮೌಲ್ಯ. ಅದರ ಅರ್ಥ ಸಾರ್ವಜನಿಕರಿಗೆ ಇರಬೇಕಾದ ಅರಿವು, ತಿಳುವಳಿಕೆ, ಜ್ಞಾನ ಎನ್ನಬಹುದು. ಪ್ರಜ್ಞೆ ಎನ್ನುವುದು ನಿರಂತರ ಪ್ರಕ್ರಿಯೆಗೆ ಒಳಗಾಗುವ ಚಲನಶೀಲಯುಳ್ಳ ಗುಣ. "ಸಾರ್ವಜನಿಕ ಪ್ರಜ್ಞೆ ಎಂದರೆ ಪ್ರತಿಯೊಂದು ತಪ್ಪಿಗೂ (ಅನ್ಯಾಯಕ್ಕೂ) ಸಿಡಿದೇಳುವ ಪ್ರಜ್ಞೆ, ಯಾರು ಕಷ್ಟದಿಂದ ಬಳಲುತ್ತಿದ್ದಾರೆ ಎಂಬುದು ಮುಖ್ಯವಲ್ಲ, ಕಷ್ಟ ಅನುಭವಿಸುತ್ತಿರುವವರೊಂದಿಗೆ ಭಾಗಿಯಾಗುವುದೇ ಸಾರ್ವಜನಿಕ ಪ್ರಜ್ಞೆ"[8] ಭಾರತದಂತಹ ಅಸಮಾನತೆಯುಳ್ಳ ಜಾತಿ, ಧರ್ಮ, ಲಿಂಗಗಳಿಂದ ಅನುಭವಿಸುತ್ತಿರುವ ಸಂಕಟಗಳಿಗೆ ಎಲ್ಲರೂ ಭಾಗಿಗಳಾಗಬೇಕು, ಅನಿಷ್ಟಗಳ ವಿರುದ್ಧವಾಗಿ ಪ್ರಶ್ನಿಸಿ, ಸಿಡಿದೇಳುವಂಹದ್ದೇ ಈ ಪ್ರಜ್ಞೆಯ ಮೂಲ ಹರವು. ದೇವನೂರ ಮಹಾದೇವ ಹೇಳಿದ ಮಾತು ಉಲ್ಲೇಖನೀಯ 'ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ, ಒಂದು ಜೀವಿಗೆ ಆಗುವ ದುಃಖ ದುಮ್ಮಾನಗಳು ಪರಿಸರದಲ್ಲಿ ಉಸಿರಾಡುವ ಎಲ್ಲಾ ಜೀವಿಗಳಲ್ಲೂ ಕಂಪನ ಮತ್ತು ಅನುಕಂಪನ ಉಂಟು ಮಾಡುತ್ತಿರುತ್ತದೆಯಂತೆ' ಎನ್ನುವರು. ಈ ಕಂಪನ ಮತ್ತು ಅನುಕಂಪನಗಳೆಂದರೆ ಸಮಷ್ಟಿಯ ಸಾರ್ವಜನಿಕ ಪ್ರಜ್ಞೆ ಎನ್ನಬಹುದು. ಇದು ಏಕ ವ್ಯಕ್ತಿಯ ನೆಲೆಗೆ ನಿಲ್ಲದೆ ಸಾಮುದಾಯಿಕ ಕೇಂದ್ರದಲ್ಲಿ ಲೀನವಾಗುತ್ತದೆ. ಆಗ ಎಲ್ಲರನ್ನೂ ಒಳಗೊಳ್ಳುತ್ತದೆ. ಇದು ಬೇಕು ಮನುಷ್ಯ ಸಹಸಂಬಂಧಕ್ಕೆ.

**ಜಾತ್ಯತೀತತೆ:**

ಪ್ರಜಾಪ್ರಭುತ್ವದ ಮತ್ತೊಂದು ಮೌಲ್ಯವೆಂದರೆ ಅದು ಜಾತ್ಯತೀತ ಪರಿಕಲ್ಪನೆ. ಭಾರತದಂತಹ ಮಲ್ಟಿ ಕಲ್ಚರ್ ಗೆ ಇದು ಉಸಿರಾಗುತ್ತದೆ. ಬಹು ಆಯಾಮಗಳುಳ್ಳ ಸಮುದಾಯಗಳನ್ನು ಒಳಗೊಂಡ ಬೃಹತ್ ಸಮಾಜ. ಛಿದ್ರಗೊಳ್ಳದಂತೆ

ಸಮುದಾಯಗಳನ್ನು ಒಂದು ದಾರದಲ್ಲಿ ಹಿಡಿದಿಡಲು ಇದು ಬೇಕು. ಪ್ರಜಾಪ್ರಭುತ್ವದ ಕಟ್ಟಡಕ್ಕೆ ಅಡಿಪಾಯದ ಕಲ್ಲು. "ಅದು ನಮ್ಮ ಸಹಜೀವನವನ್ನು ಒಗ್ಗೂಡಿಸುವ ಶಕ್ತಿ ಜಾತ್ಯತೀತ ತತ್ವದ ಆಧಾರದ ಮೇಲೆ ಮಾತ್ರ ಚರಿತ್ರೆಯಲ್ಲಿ ಚಲನೆ ತರಲು ಸಾಧ್ಯ."[9] ಈ ಮೌಲ್ಯ ಸಹಜೀವನದ ಮಾರ್ಗದರ್ಶಿ. ಎಷ್ಟಗತ್ಯವಿದೆ ಎಂದರೆ, ಒಂದು–ಒಗ್ಗೂಡಿಸುವ ಶಕ್ತಿ, ಎರಡು–ಚಾರಿತ್ರಿಕ ಚಲನೆ ಉಂಟು ಮಾಡುತ್ತದೆ. ಇಂತಹ ಅಂತಸತ್ವವುಳ್ಳ ತತ್ವವು ಸಮಾಜಕ್ಕೆ ದೊಡ್ಡ ಕೊಡುಗೆಯೇ. ಇದನ್ನು ಕಾಪಾಡಿಕೊಂಡು ಜೋಪಾನವಾಗಿ ಮುನ್ನಡೆಸಿಕೊಂಡು ಹೋಗಬೇಕಿದೆ. ಇದು ಪ್ರಜಾಪ್ರಭುತ್ವದ ಆಧಾರ ಸ್ತಂಭಕ್ಕೂ ಕಾರಣವಾಗುತ್ತದೆ. ಅನೇಕ ಸಾಮಾಜಿಕ ತರತಮಗಳಿಗೆ ಇದು ಮದ್ದು. ಜಾತಿ ಮತಗಳ ಅರಾಜಕತೆಯನ್ನು ಪ್ರಶ್ನಿಸುತ್ತದೆ. ವೈವಿಧ್ಯತೆಯುಳ್ಳ ಭಾರತದಂತಹ ದೇಶವನ್ನು ಹಿಡಿದಿಟ್ಟಿರುವ ಮೌಲ್ಯ ಯಾವುದಾದರೂ ಇದ್ದರೆ ಅದು ಜಾತ್ಯತೀತ ಮೌಲ್ಯವೇ ಆಗಿರುತ್ತದೆ. ಇನ್ನು ಸುಲಭವಾಗಿ ಹೇಳುವುದಾದರೆ ಅವರವರ ಮತ ಧರ್ಮಗಳಲ್ಲಿ ಜೀವಿಸುವುದು ಎಂದರ್ಥ. ಪರಸ್ಪರರಲ್ಲಿ ಸಮಾನ ಗೌರವದ ಕೊಡುಕೊಳ್ಳುವಿಕೆಯನ್ನುಂಟು ಮಾಡುವುದು. ಸಹಿಷ್ಣುತಾ ಭಾವ. ತಾನು ಬದುಕುವುದು ಇತರರನ್ನು ಬದುಕಲು ಬಿಡುವುದು. ಇದರಿಂದಾಗಿ ಮಾನವತೆಯು ಬದುಕುತ್ತದೆ ಮತ್ತು ಬದುಕಿಸುತ್ತದೆ.

**ಪ್ರಜಾಪ್ರಭುತ್ವದ ಸಫಲತೆ:**

ಪ್ರಜಾಪ್ರಭುತ್ವ ಇದ್ದರೆ ಸಾಲದು, ಜನರ ಮಧ್ಯೆ ಬದುಕಿರಬೇಕು. ಅದರ ಸಫಲತೆ ಕೆಲವು ಮಾನದಂಡಗಳಿಂದ ಗುರುತಿಸಿಕೊಳ್ಳಬೇಕು.

"1. ಸಮಾಜದಲ್ಲಿ ತೀವ್ರತರವಾದ ಅಸಮಾನತೆಗಳಿರಬಾರದು, ಒಂದು ವರ್ಗಕ್ಕೆ ಮಾತ್ರ ವಿಶೇಷ ಅಧಿಕಾರವಿರಬಾರದು.

2. ವಿರೋಧ ಪಕ್ಷ ಅಸ್ಥಿತ್ವದಲ್ಲಿರಬೇಕು.

3. ಕಾನೂನಿನಲ್ಲಿಯೂ, ಆಡಳಿತದಲ್ಲಿಯೂ ಸರ್ವಸಮಾನತೆ ಇರಬೇಕು.

4. ಸಾಂವಿಧಾನಿಕ ನೈತಿಕತೆಯ ಪಾಲನೆ ಮಾಡಬೇಕು.

5. ಬಹು ಸಂಖ್ಯಾತರ ದಬ್ಬಾಳಿಕೆ ಇರಬಾರದು.

6. ಸಮಾಜದಲ್ಲಿ ನೀತಿ ಪ್ರಜ್ಞೆ ಇರಬೇಕು.

7. ಸಾರ್ವಜನಿಕ ಪ್ರಾಮಾಣಿಕತೆ ಇರಬೇಕು. "[10]

ಈ ಲಕ್ಷಣಗಳು ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಮತ್ತಿತರ ವಲಯಗಳಿಗೆ ಹರಿಯ ತೊಡಗಬೇಕು. ಆಗ ಪ್ರಜಾಪ್ರಭುತ್ವವು ಖಾತ್ರಿಯಾಗುತ್ತದೆ. ಅದೇನಾದರೂ ನಿಷ್ಕ್ರಿಯೆಗೊಂಡರೆ ಅಪಾಯ ಕಟ್ಟಿಟ್ಟ ಬುತ್ತಿ. ಸರ್ವನಾಶದ ಸೂಚನೆ.

**ಪ್ರಜಾಪ್ರಭುತ್ವದ ಸವಾಲುಗಳು:**

ಪ್ರಜಾಪ್ರಭುತ್ವದ ತತ್ವ ಬಹು ವರ್ಷಗಳಿಂದಲೂ ನಮ್ಮ ಒಡನಾಡಿಯಾಗಿ ಹರಿದು ಬಂದಿದೆ. ಅದು ಒಡಲುಗೊಂಡಿದಿಯೋ ಇಲ್ಲವೋ ಎನ್ನುವುದನ್ನು ಚರ್ಚಿಸುವುದು ಇಂದಿನ ಅಗತ್ಯ ಪ್ರಶ್ನೆ. ಪ್ರಜಾಪ್ರಭುತ್ವದ ತಳಹದಿಯ ಅಸ್ಥಿತ್ವ ಚುನಾವಣೆ. ನಿಗಧಿತ ವಯಸ್ಸುಳ್ಳ ಲಿಂಗ, ಜಾತಿ, ಮತ ಹೊರತಾದ ಎಲ್ಲಾ ವ್ಯಕ್ತಿಗಳು ಮತ ಚಲಾಯಿಸಬಹುದು. ಸಂವಿಧಾನ ಅವಕಾಶ ಮಾಡಿಕೊಟ್ಟಿದೆ. ಪ್ರತಿ ಐದು ವರ್ಷಕ್ಕೊಮ್ಮೆ ಪ್ರಜೆಗಳಿಂದ ಆಯ್ಕೆಯಾಗುವ ಸರ್ಕಾರ ರಚನೆಗೊಳ್ಳುತ್ತದೆ. “ಭಾರತದ ಸಂದರ್ಭದಲ್ಲಿ ಡೆಮಾಕ್ರಸಿ ಅಷ್ಟು ಸುಲಭವಾಗಿ ಒಗ್ಗುವಂತಹದ್ದಲ್ಲ ಎಂದು ಕಳೆದ 70 ವರ್ಷಗಳ ಅನುಭವದಲ್ಲಿ ನಮಗೆ ತಿಳಿದಿದೆ. ಜೇಮ್ಸ್ ಬೋವರ್ಡ ಹೇಳುವಂತೆ “ಎರಡು ತೋಳಗಳು ಮತ್ತು ಒಂದು ಕುರಿಮರಿ ಸೇರಿ ರಾತ್ರಿ ಊಟಕ್ಕೆ ಏನಿರಬೇಕೆಂದು ಮತ ಚಲಾಯಿಸಿದಂತಿದೆ.”[11] ಇಲ್ಲಿನ ಜಾತಿ ಪದ್ದತಿ ಮೇಲ್ನೋಟಕ್ಕೆ ಸಂವಿಧಾನದ ಆಶಯಗಳನ್ನು ಒಪ್ಪಿಕೊಂಡಂತೆ ವರ್ತಿಸುತ್ತದೆ. ಅನಂತರ ಚುನಾವಣಾ ಸಂದರ್ಭದಲ್ಲಿ ಜಾತಿಗಳ ಆಧಾರದ ಮೇಲೆ ಭಗ್ನಗೊಳಿಸುತ್ತದೆ. ಈ ವಿಧಾನವಿದೆಯಲ್ಲ ಇದು ಚುನಾವಣೆಯ ಮೂಲಕವೇ ಪ್ರಜಾಪ್ರಭುತ್ವದ ಬುಡವನ್ನೇ ಅಲುಗಾಡಿಸಿ ಬಿಡುತ್ತದೆ. ಜಾತಿಗಳ ಪ್ರಾತಿನಿಧ್ಯದ ಮೇಲೆ ರಚನೆಗೊಂಡ ಒಂದು ಸರ್ಕಾರ ಯಾವ ಮಾದರಿಯ ಸರ್ಕಾರ ಕಟ್ಟಿಕೊಡುತ್ತದೆ. ಸಂಪುಟ ರಚನೆ ಮತ್ತಿತರ ವ್ಯವಸ್ಥೆಗಳನ್ನು ಪುನಃ ಜಾತಿಯ ಒಂಟಿಗಾಲಿನ ಮೇಲೆ ನಿಲ್ಲುತ್ತದೆ. ಹಾಗೆ ನಡೆದು ಹೋಗುತ್ತದೆ. ಇದರಿಂದಾಗಿ ಹೊರಗಣ್ಣಿಗೆ ದೊಡ್ಡ ಪ್ರಜಾಪ್ರಭುತ್ವ. ಒಳ ಒಳಗೆ ಪ್ರಜಾಪ್ರಭುತ್ವದ ಅವನತಿ. ಅದಕ್ಕಾಗಿ ಹೊಸ ಪೀಳಿಗೆಗೆ ಪ್ರಜಾಪ್ರಭುತ್ವದ ನವೀಕರಣದ ಆಲೋಚನೆಗಳ ಕಡೆ ಹೊರಳಬೇಕಿದೆ. ದೇಶದ ಪ್ರತಿಯೊಬ್ಬ ಪ್ರಜೆಯು ಅದರ ಅನಿವಾರ್ಯತೆಯನ್ನು ಅರ್ಥಮಾಡಿಕೊಂಡು ಮುನ್ನಡೆಯಬೇಕಿದೆ. ಇದು ಇಂದಿನ ತುರ್ತು.

**ಕೊನೆ ಟಿಪ್ಪಣಿಗಳು:**

1. ಶಿವರಾಂ ಎನ್. ಆರ್. , (2022), ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್, ಸಮತ ಪ್ರಕಾಶನ, ಮೈಸೂರು, ಪು. ಸಂ. 183
2. ಅದೇ, ಪು. ಸಂ. 179
3. ಅದೇ, ಪು. ಸಂ. 189
4. ಅದೇ, ಪು. ಸಂ. 184
5. ಮೂಡ್ನಾಕೂಡು ಚಿನ್ನಸ್ವಾಮಿ, (2019), ಸಮಗ್ರ ಸಾಹಿತ್ಯ: ಸಂಪುಟ–4, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು. ಸಂ. 103

6. ಶಿವರಾಂ ಎನ್. ಆರ್. , (2022), ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್, ಸಮತ ಪ್ರಕಾಶನ, ಮೈಸೂರು, ಪು. ಸಂ. 183
7. ಅದೇ, ಪು. ಸಂ. 193
8. ಅದೇ, ಪು. ಸಂ. 171
9. ಅದೇ, ಪು. ಸಂ. 171
10. ಅದೇ, ಪು. ಸಂ. 180
11. ಮೂಡ್ನಾಕೂಡು ಚಿನ್ನಸ್ವಾಮಿ, (2019), ಸಮಗ್ರ ಸಾಹಿತ್ಯ: ಸಂಪುಟ–4, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು. ಸಂ. 103

## ಪರಾಮರ್ಶನ ಗ್ರಂಥಗಳು:

1. ಅಂಬೇಡ್ಕರ್ ಬಿ. ಆರ್. (ಮೂಲ), ವಿವಿಧ ಲೇಖಕರು (ಅನು), (2015), ಬಾಬಾ ಸಾಹೇಬ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು ಸಂಪುಟ–17, ಕನ್ನಡ ಮತ್ತು ಸಂಸ್ಕೃತಿ ಇಲಾಖೆ & ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
2. ಅಂಬೇಡ್ಕರ್ ಬಿ. ಆರ್. (ಮೂಲ), ವಿವಿಧ ಲೇಖಕರು (ಅನು), (2015), ಬಾಬಾ ಸಾಹೇಬ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು ಸಂಪುಟ–20, ಕನ್ನಡ ಮತ್ತು ಸಂಸ್ಕೃತಿ ಇಲಾಖೆ & ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
3. ಮೂಡ್ನಾಕೂಡು ಚಿನ್ನಸ್ವಾಮಿ, (2019), ಸಮಗ್ರ ಸಾಹಿತ್ಯ: ಸಂಪುಟ–4, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
4. ಶಿವರಾಂ ಎನ್. ಆರ್. , (2022), ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್, ಸಮತ ಪ್ರಕಾಶನ, ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.